**ಎರಡನೇ ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ**
**ಕನಕಪುರ**

**ಸಿ.ಸಿ ನಂಃ 645/2012**

| | | | |
|---|---|---|---|
| **ಚಾಸಾ ಃ** | **9** | **ಪ್ರಾಸಾಃ-** | **7** |

| | |
|---|---|
| ಹೆಸರು | ತಕತ್ ಸಿಂಗ್ ರಾಣವತ್ |
| ತಂದೆಯ ಹೆಸರು | ಕಿಸನ್ ಸಿಂಗ್ ರಾಣವತ್ |
| ವಯಸ್ಸು | **46** |
| ಉದ್ಯೋಗ | **Private Secretary for Ministry of steel Government of India** |
| ವಿಳಾಸ | ದೆಹಲಿ |

**ದಿಃ 09.04.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋದಿಸಲಾಯಿತು.**

**<u>ಮುಖ್ಯವಿಚಾರಣೆ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದಃ-</u>**

ನಾನು 22.02.2012 ರಿಂದ 20.12.2013 ರವರೆಗೆ ರಾಮನಗರ ಜಿಲ್ಲೆಯಲ್ಲಿ DCF ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ಚಾಸಾ-7 ರವರು RFO , ಕನಕಪುರದಲ್ಲಿ ಕೆಲಸ ಮಾಡುತ್ತಿದ್ದು , FOC 42/2011-12 ಸಂಬಂಧ ವರದಿಯನ್ನು ನನ್ನ ಮುಂದೆ ಸಲ್ಲಿಸಿರುತ್ತಾರೆ. ಸದರಿ ವರದಿಯನ್ನು ನಾನು ಪರಿಶೀಲನೆ ಮಾಡಿ ನಾನು ನ್ಯಾಯಾಲಯಕ್ಕೆ ದೋಷಾರೋಪಣ ಪಟ್ಟಿ ಸಲ್ಲಿಸುವಂತೆ ಆದೇಶ ಮಾಡಿರುತ್ತೇನೆ.

ಸಾಕ್ಷಿದಾರರು ಆದೇಶದ ಪ್ರತಿಯನ್ನು ನೋಡಿ ಗುರುತಿಸಿದ ಕಾರಣ ನಿ ಪಿ 6 ಎಂದು , ಸಾಕ್ಷಿಯ ಸಹಿಯನ್ನು ನಿ ಪಿ 6 (ಎ ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಕೆ ವಿ ವಿ ವಕೀಲರಿಂದಃ**

ನೀವು ಸ್ಥಳಕ್ಕೆ ಹೋಗಿ ಘಟನೆಯ ಸಂಬಂಧ ಪರಿಶೀಲನೆ ಮಾಡಿರುವುದಿಲ್ಲ ಎಂದರೆ ಸರಿ . ಸರ್ವೆ ನಂ. 67 ಗೋಮಾಳ ಲ್ಯಾಂಡ್ ಎಂದರೆ ಸರಿಯಲ್ಲ , ಅರ್ಧ ಅರಣ್ಯಕ್ಕೆ ಸೇರಿರುತ್ತದೆ ಎಂದು ನುಡಿಯತ್ತಾರೆ. ಸರ್ವೆ ನಂ. 67 ರಲ್ಲಿ ಸರ್ಕಾರದವರು 1 ನೇ ಆರೋಪಿಗೆ ಕೋರೆ ಕೆಲಸ ಮಾಡಲು ಲೀಜ್ ಗೆ ನೀಡಿದ್ದರು ಎಂದರೆ ಸರಿ . ಲೀಜ್ ಗೆ ನೀಡುವ ಮುಂಚೆ ಎಸಿ ಮತ್ತು ಡಿಸಿ , ಫಾರೆಸ್ಟ್ ಅಧಿಕಾರಿಗಳು ಚರ್ಚೆ ಮಾಡಿ ಲೀಜ್ ಗೆ ಅನುಮತಿ ನೀಡಿದ್ದರು ಎಂದರೆ ಸರಿ .

ಫಾರೆಸ್ಟ್ ಜಾಗದಲ್ಲಿ ಆರೋಪಿಗಳು ಯಾವುದೇ ಅವ್ಯವಹಾರ ಮಾಡದಿದ್ದರೂ ಠಾಣಾ ಅಂಕಿ ಅಂಶಕ್ಕಾಗಿ ಸದರಿ ಪ್ರಕರಣವನ್ನು ದಾಖಲಿಸಿರುತ್ತಾರೆ ಎಂದರೆ ಸಾಕ್ಷಿದಾರರು ಆರೋಪಿಗಳು ಅರಣ್ಯ ಪ್ರದೇಶವನ್ನು ಒತ್ತುವರಿ ಮಾಡಿ ಮರಗಳನ್ನು ಕಡಿದು ಹಾಕಿರುತ್ತಾರೆ . ಅವರಿಗೆ ಸರ್ಕಾರದ ಆದೇಶದ ಪ್ರಕಾರ ಲೀಜ್ ಆಗಿರುವುದಿಲ್ಲ , ಕಾನೂನು ಬಾಹಿರವಾಗಿ ಲೀಜ್ ಗೆ ಪಡೆದಿರುವುದಾಗಿ ಸಾಕ್ಷಿದಾರರು ನುಡಿಯತ್ತಾರೆ. ಠಾಣಾ ಅಂಕಿ ಅಂಶಕ್ಕಾಗಿ ನೀವು ಚಾಸಾ-7 ರವರಿಗೆ ಆರೋಪಿಗಳ ವಿರುದ್ಧ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿರುತ್ತೀರಿ ಎಂದರೆ ಸರಿಯಲ್ಲ. ಅರಣ್ಯ ಪ್ರದೇಶದಲ್ಲಿ 4 ಗುಂಟೆ ಜಾಗ ಲೀಜ್ ಗೆ ಆರೋಪಿಗಳು ಪಡೆದಿರುವುದಾಗಿ ನುಡಿಯತ್ತಾರೆ. ಆ್ರೋಪಿಗಳು ಅರಣ್ಯ ಪ್ರದೇಶಕ್ಕೆ ಯಾವತ್ತೂ ಬಂದಿರುವುದಿಲ್ಲ , ಹಾಗೂ ಅರಣ್ಯದಲ್ಲಿ ಮರಗಳನ್ನು ಕಡಿದಿರುವುದಿಲ್ಲ , ನೀವು ಠಾಣಾ ಅಂಕಿ ಅಂಶಕ್ಕಾಗಿ ಆರೋಪಿಗಳ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿ , ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಆರೋಪಿಗಳು ಯಾವುದೇ ತಪ್ಪು ಮಾಡದೇ ಇದ್ದರೂ ಸುಳ್ಳು ಪ್ರಕರಣ ದಾಖಲಿಸಿರುತ್ತೀರಿ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲಃ**

**(ಸಾಕ್ಷಿಯ ವಿಚಾರಣೆಯನ್ನು ನಾನು ತೆರೆದ ನ್ಯಾಯಾಲಯದಲ್ಲಿ ಪಡೆದುಕೊಂಡಿರುತ್ತೇನೆ ಎಂದು ದೃಡಿಕರೀಸುತ್ತೇನೆ.)**

**ಎರಡನೇ ಅಪರ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ, ಕನಕಪುರ**

ಓ ಹೇ ಕೇ ಪ ಇ